**ಸಾಮಾನ್ಯ ಸೂಚನೆಗಳು :**

1. ಇದು ಪ್ರಶ್ನೆ ಸಹಿತ ಉತ್ತರ ಪುಸ್ತಕವಾಗಿದೆ.
2. ಪ್ರತಿ ಪ್ರಶ್ನೆಗೂ ಉತ್ತರ ಬರೆಯಲು ಪ್ರಶ್ನೋತ್ತರ ಪುಸ್ತಕದಲ್ಲಿಯೇ ಸ್ಥಳಾವಕಾಶ ಮಾಡಿಕೊಡಲಾಗಿದೆ. ಉತ್ತರಗಳನ್ನು ನಿರ್ದಿಷ್ಟಪಡಿಸಿದ ಜಾಗದಲ್ಲಿಯೇ ಬರೆಯಬೇಕು.
3. ಈ ಪ್ರಶ್ನೋತ್ತರ ಪುಸ್ತಕವು **56** ಪ್ರಶ್ನೆಗಳನ್ನು ಹೊಂದಿದೆ, ಹೊಂದಿಸಿ ಬರೆಯಿರಿ ಪ್ರಶ್ನೆ ಸೇರಿದಂತೆ.
4. ಪರೀಕ್ಷಾರ್ಥಿಗಳು ಉತ್ತರಗಳನ್ನು ಪೆನ್ಸಿಲ್‌ನಲ್ಲಿ (ಸೀಸದ ಕಡ್ಡಿ) ಬರೆಯಬಾರದು. ಬರೆದರೆ ಅಂತಹ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕಾಶೆಯನ್ನು ಹೊರತುಪಡಿಸಿ)
5. ಬಹು ಆಯ್ಕೆ, ಬಿಟ್ಟ ಸ್ಥಳ ತುಂಬುವ ಮತ್ತೆ ಹೊಂದಿಸುವ ಪ್ರಶ್ನೆಗಳಲ್ಲಿ . ಪರೀಕ್ಷಾರ್ಥಿಗಳು ತಿದ್ದಿ / ಹೊಡೆದು ಬರೆಯುವುದನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

---

**I** ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿಯೇ ಪೂರ್ಣ ಉತ್ತರವನ್ನು ಅದರ ಕ್ರಮಾಂಕದೊಡನೆ ಬರೆಯಿರಿ.
**[15 × 1 = 15]**

1. ರೈತರಿಗೆ ತಮ್ಮ ಭೂಮಿಯ ಮೇಲಿನ ಹಕ್ಕನ್ನು ದೃಡಪಡಿಸಿದ ಕಂದಾಯ ವ್ಯವಸ್ಥೆ –
   (A) ರೈತವಾರಿ ಪದ್ಧತಿ
   (B) ಚೌತಾಯಿ ಪದ್ಧತಿ
   (C) ಜಮೀನ್ದಾರಿ ಪದ್ಧತಿ
   (D) ಖಾಯಂ ಗುತ್ತಾ ಪದ್ಧತಿ

2. 1853ರ ಚಾರ್ಟರ್ ಶಾಸನ ಭಾರತದ ಸಂವಿಧಾನಾತ್ಮಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಕಾರಣ–
   (A) ಸರ್ಕಾರಿ ಸೇವೆಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಜಾರಿಗೆ ತರಲಾಯಿತು.
   (B) ಗವರ್ನರ್ ಜನರಲ್‌ನ ಸಲಹಾ ಸಮಿತಿಗೆ ಕಾನೂನು ಸದಸ್ಯನನ್ನು ಸೇರಿಸಲಾಯಿತು.
   (C) ಮತೀಯ ಆಧಾರದ ಮೇಲೆ ಪ್ರತ್ಯೇಕ ಚುನಾವಣೆ ಜಾರಿಗೆ ತರಲಾಯಿತು.
   (D) ಇದು ಪರಿಣಾಮಕಾರಿ ಶಾಸಕಾಂಗವನ್ನು ಸೃಷ್ಟಿಸಿತು.

3. ಕರ್ನಾಟಕದ ಅಂಕೋಲ ಪ್ರಸಿದ್ಧವಾಗಲು ಕಾರಣ ಅಲ್ಲಿ–
   (A) ಮದ್ಯದ ಅಂಗಡಿಗಳ ಮುಂದೆ ಸತ್ಯಾಗ್ರಹ ನಡೆಸಲಾಯಿತು.
   (B) ಅರಣ್ಯ ಸತ್ಯಾಗ್ರಹ ನಡೆಸಲಾಯಿತು.
   (C) ಉಪ್ಪಿನ ಸತ್ಯಾಗ್ರಹ ನಡೆಸಲಾಯಿತು.
   (D) ಧ್ವಜ ಸತ್ಯಾಗ್ರಹ ನಡೆಸಲಾಯಿತು.

4. ಸರದಾರ ವಲ್ಲಭಭಾಯಿ ಪಟೇಲರು ರಾಜಧನ ಪದ್ಧತಿ ರೂಪಿಸದಿದ್ದಿದ್ದರೆ–

   (A) ಭಾರತ ಐಕ್ಯತೆಯನ್ನು ಪಡೆಯುತ್ತಿರಲಿಲ್ಲ.

   (B) ಆಂಗ್ಲರು ಸ್ವಾತಂತ್ರ್ಯ ನೀಡುತ್ತಿರಲಿಲ್ಲ.

   (C) ಕಾಶ್ಮೀರ ಭಾರತಕ್ಕೆ ಸೇರ್ಪಡೆ ಯಾಗುತ್ತಿರಲಿಲ್ಲ.

   (D) ಹೈದರಾಬಾದಿನ ನಿಜಾಮ ಶರಣಾಗುತ್ತಿರಲಿಲ್ಲ.

5. 1966 ರಲ್ಲಿ ಚೀನಾದಲ್ಲಿ ನಡೆಸಿದ ಸಾಂಸ್ಕೃತಿಕ ಕ್ರಾಂತಿಯ ಉದ್ದೇಶ–

   (A) ಜಪಾನೀಯರನ್ನು ಮಂಚೂರಿಯಾದಿಂದ ಹೊರಹಾಕುವುದು.

   (B) ಮಂಚೂ ದೊರೆಗಳ ಆಡಳಿತವನ್ನು ಕೊನೆಗೊಳಿಸುವುದು.

   (C) ಬೌದ್ಧ ದೇವಾಲಯಗಳನ್ನು ನಾಶಪಡಿಸುವುದು ಮತ್ತು ಧಾರ್ಮಿಕ ನಂಬಿಕೆಯುಳ್ಳವರನ್ನು ಕೊಲ್ಲುವುದು.

   (D) ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು.

6. ಹಿರೋಷಿಮಾ ಮತ್ತು ನಾಗಾಸಾಕಿಗಳ ಮೇಲೆ ಅಮೇರಿಕ ಬಾಂಬ್‌ದಾಳಿ ಮಾಡಿಲ್ಲದಿದ್ದರೆ–

   (A) ಎರಡನೆ ವಿಶ್ವಸಮರ ನಡೆಯುತ್ತಿರಲಿಲ್ಲ.

   (B) ಜಾಪಾನ್ ಎರಡನೆ ವಿಶ್ವಸಮರಕ್ಕೆ ಪ್ರವೇಶಿಸುತ್ತಿರಲಿಲ್ಲ.

   (C) ಜಾಪಾನ್ ಯಾವುದೇ ಶರತ್ತುಗಳಿಲ್ಲದೆ ಶರಣಾಗುತ್ತಿರಲಿಲ್ಲ.

   (D) ಜರ್ಮನಿ ಶರಣಾಗುತ್ತಿರಲಿಲ್ಲ.

7. ಭಾರತ ಸಂವಿಧಾನದ 93ನೇ ತಿದ್ದುಪಡಿಯ ಪ್ರಕಾರ ಮೂಲಭೂತ ಹಕ್ಕೆಂದು ಸಾರಲ್ಪಟ್ಟಿದ್ದು–

   (A) ಸಾಂಸ್ಕೃತಿಕ ಹಕ್ಕು

   (B) ಧಾರ್ಮಿಕ ಹಕ್ಕು

   (C) ಸಮಾನತೆಯ ಹಕ್ಕು

   (D) ಶೈಕ್ಷಣಿಕ ಹಕ್ಕು

8. ಭಾರತವು ಇಂದು ಎದುರಿಸುತ್ತಿರುವ ತೀರ ಗಂಭೀರವಾದ ಸವಾಲು ಎಂದರೆ–

(A) ಭಯೋತ್ಪಾದನೆ

(B) ಕೋಮುವಾದ

(C) ಪ್ರಾಂತೀಯತೆ

(D) ಅನಕ್ಷರತೆ

9. ಇತಿಹಾಸದುದ್ದಕ್ಕೂ ಮಾನವ ತನ್ನ ಹಕ್ಕಿಗಾಗಿ ಹೋರಾಡುತ್ತಾ ಬಂದಿದ್ದಾನೆ ಏಕೆಂದರೆ ಮಾನವ ಹಕ್ಕುಗಳು–

(A) ಒಂದು ಸಮಾಜ ಸ್ಥಾಪನೆಗೆ ಅವಶ್ಯಕ

(B) ಒಂದು ರಾಜ್ಯ ಸ್ಥಾಪನೆಗಾಗಿ ಅವಶ್ಯಕ

(C) ಪ್ರತಿಯೊಬ್ಬನ ಸಂಪೂರ್ಣ ಬೆಳವಣಿಗೆಗೆ ಅವಶ್ಯಕ

(D) ಜನಾಂಗ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಅವಶ್ಯಕ.

10. ನೈಋತ್ಯ ಮಾನ್‌ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಆರಂಭಿಸುತ್ತವೆ ಕಾರಣ–

(A) ಒಳನಾಡಿನ ಉಷ್ಣಾಂಶ ಹೆಚ್ಚುತ್ತಾ ಒತ್ತಡ ಕಡಿಮೆಯಾಗುತ್ತಾ ಹೋಗುವುದು.

(B) ಒಳನಾಡಿನ ಉಷ್ಣಾಂಶ ಕಡಿಮೆಯಾಗಿ ಒತ್ತಡ ಹೆಚ್ಚುತ್ತಾ ಹೋಗುವುದು.

(C) ಒಳನಾಡಿನ ಉಷ್ಣಾಂಶ ಮತ್ತು ಒತ್ತಡ ಕಡಿಮೆಯಾಗುವುದು.

(D) ಒಳನಾಡಿನ ಉಷ್ಣಾಂಶ ಮತ್ತು ಒತ್ತಡ ಹೆಚ್ಚಾಗುವುದು.

11. ಮ್ಯಾಂಗ್ರೂವ್ ಕಾಡುಗಳಲ್ಲಿರುವ ಬಿಳಲು ಬೇರುಗಳ ಮರಗಳಿಗೆ ಅತ್ಯುತ್ತಮ ಉದಾಹರಣೆ ––

(A) ಶ್ರೀಗಂಧ (B) ತೇಗ

(C) ಆಲ (D) ಮಾವು

12. ಭಾರತದ ಮೊಟ್ಟಮೊದಲ ಕಾಗದ ಉತ್ಪಾದಕ ಕೈಗಾರಿಕೆ ಸ್ಥಾಪನೆಯಾದದ್ದು –

(A) ಕೊಲ್ಕತ್ತಾ ಬಳಿಯ ಬ್ಯಾಲಿ ಎಂಬಲ್ಲಿ (B) ಕೊಲ್ಕತ್ತಾ ಬಳಿಯ ರಿಶ್ರ ಎಂಬಲ್ಲಿ

(C) ಮಧ್ಯ ಪ್ರದೇಶದ ನೇಪಾನಗರದಲ್ಲಿ (D) ಕರ್ನಾಟಕದ ಭದ್ರಾವತಿಯಲ್ಲಿ

**13.** ರಫ್ತು ಮಾಡುವ ವಸ್ತುಗಳನ್ನು ತಯಾರಿಸುವವರಿಗೆ ಜಾಮಿನು ಕೊಡುವ ಬ್ಯಾಂಕ್ –

(A) ರಿಜರ್ವ್ ಬ್ಯಾಂಕ್

(B) ಅಪೆಕ್ಸ್ ಬ್ಯಾಂಕ್

(C) ಸ್ಟೇಟ್ ಬ್ಯಾಂಕ್

(D) ಎಕ್ಸಿಂ ಬ್ಯಾಂಕ್

**14.** ರಾಷ್ಟ್ರೀಯ ಸಣ್ಣ ಕೈಗಾರಿಕಾ ನಿಗಮವನ್ನು ಸ್ಥಾಪಿಸಿದ ಉದ್ದೇಶ –

(A) ಸಂಘಟನಾತ್ಮಕ ನೆರವು ನೀಡಲು

(B) ಹಣಕಾಸಿನ ನೆರವು ನೀಡಲು

(C) ತಾಂತ್ರಿಕ ನೆರವು ನೀಡಲು

(D) ಸಂಶೋಧನೆ ಮತ್ತು ತರಬೇತಿ ನೆರವು ನೀಡಲು

**15.** ಸಕ್ಕರೆ ಕಾರ್ಖಾನೆ ಕಚ್ಚಾವಸ್ತು ಆಧಾರಿತ ಕಾರ್ಖಾನೆ ಏಕೆಂದರೆ –

(A) ಕಚ್ಚಾವಸ್ತುವಾದ ಕಬ್ಬು ತೂಕ ಕಳೆದುಕೊಳ್ಳುವ ಮತ್ತು ಕೆಟ್ಟುಹೋಗುವ ವಸ್ತುವಾಗಿದೆ.

(B) ಸಂಗ್ರಹಿಸಿ ಬಳಸಬಹುದಾಗಿದೆ.

(C) ಬೆಲ್ಲ ತಯಾರಿಕೆಗೂ ಬಳಸಲಾಗುತ್ತೆ

(D) ಕೆಲವೇ ಪ್ರದೇಶಗಳಲ್ಲಿ ಬೆಳೆಯಲಾಗುತ್ತೆ

**II** ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ. **[5 × 1 = 5]**

**16.** ಸ್ಟಾಲಿನ್‌ನು ಭೂಮಿಯ ಖಾಸಗಿ ಒಡೆತನವನ್ನು ಮುಕ್ತಾಯಗೊಳಿಸಿ ಜಾರಿಗೆ ತಂದ ಬೇಸಾಯ ಪದ್ಧತಿ ————

**17.** ಕ್ರಿ.ಶ. 1963ರಲ್ಲಿ ಒಬೋಟೆರವರ ನೇತೃತ್ವದಲ್ಲಿ ಸ್ವಾತಂತ್ರ್ಯ ಪಡೆದ ದೇಶ ————————————

**18.** ಶಾಲೆಗೆ ಮಕ್ಕಳನ್ನು ಆಕರ್ಷಿಸಲು ರಜಾ ಅವಧಿಯಲ್ಲಿ ಜಾರಿಗೆ ತಂದಿರುವ ಯೋಜನೆ ——————————

**19.** ರಾಷ್ಟ್ರೀಯ ಅರಣ್ಯ ನೀತಿಯನ್ನು ರೂಪಿಸಿದ ವರ್ಷ ——————————

**20.** ಜೀತ ಪದ್ಧತಿ ನಿರ್ಮೂಲನ ಕಾಯ್ದೆ ಜಾರಿಗೆ ಬಂದ ವರ್ಷ ——————————

**III 21.** 'A' ಪಟ್ಟಿಯಲ್ಲಿರುವ ಅಂಶಗಳಿಗೆ 'B' ಪಟ್ಟಿಯಲ್ಲಿ ಕೊಟ್ಟಿರುವ ಸರಿಯಾದ ಉತ್ತರವನ್ನು ಆರಿಸಿ ಉತ್ತರ ಬರೆಯಲು ನೀಡಿರುವ ಸ್ಥಳದಲ್ಲಿ ಕ್ರಮಾಂಕದೊಂದಿಗೆ ಬರೆಯಿರಿ. **[5 × 1 = 5]**

| A | B | ಉತ್ತರಗಳು |
|---|---|---|
| 1. ಬೆಂಗಳೂರು ಮೈಸೂರು ರೈಲ್ವೆ | A) 1909 AD | |
| 2. ಬೆಸ್ಸೀನ್ ಒಪ್ಪಂದ | B) 1784 AD | |
| 3. ಸಾಲ್ಬಾಯಿ ಒಪ್ಪಂದ | C) 1773 AD | |
| 4. ಭಾರತೀಯ ರಿಸರ್ವ್‌ಬ್ಯಾಂಕ್ ಸ್ಥಾಪನೆ | D) 1935 AD | |
| 5. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆ | E) 1882 AD | |
| | F) 1802 AD | |
| | G) 1782 AD | |
| | H) 1799 AD | |

**IV** ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಪ್ರತಿಯೊಂದಕ್ಕೂ ಉತ್ತರಿಸಿ. **[9 × 1 = 9]**

**22.** ಆಂಗ್ಲರಿಗೆ 24 ಪರಗಣಗಳ ಮೇಲೆ ಜಮೀನ್ದಾರಿ ಹಕ್ಕನ್ನು ನೀಡಿದವರಾರು ?

**23.** ಭಾರತದ ಥಿಯೋಸಾಫಿಕಲ್ ಸೊಸೈಟಿಯನ್ನು ಸ್ಥಾಪಿಸಿದವರು ಯಾರು ?

**24.** ವೀಟೋ ಅಧಿಕಾರ ಎಂದರೇನು ?

**25.** ಅಮೇರಿಕಾದ ಗಾಂಧಿ ಎಂದು ಪ್ರಸಿದ್ಧರಾಗಿರುವವರು ಯಾರು ?

**26.** ಎರಡನೆ ವಿಶ್ವಸಮರದಲ್ಲಿ ಅಮೇರಿಕ ಪಾಲ್ಗೊಂಡದ್ದೇಕೆ ?

**27.** ದಕ್ಷಿಣ ಏಷ್ಯಾ ಪ್ರಾದೇಶಿಕ ಸಹಕಾರ ಸಂಸ್ಥೆ (SAARC) ಸ್ಥಾಪನೆಯ ಉದ್ದೇಶವೇನು ?

**28.** ಮಾವಿನ ಹುಯ್ಲು ಎಂದರೇನು ?

**29.** ತಲಮಾರ್ಜನ ಅಥವಾ ನಿಕರ್ಷಣ ಎಂದರೇನು ?

**30.** ಸುಖೀರಾಜ್ಯ ಎಂದರೇನು ?

**V** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ. **[16 × 2 = 32]**

**31.** ಭಾರತದ ಒಕ್ಕೂಟಕ್ಕೆ ಜುನಾಗಡ ಸೇರ್ಪಡೆ ಹೊಂದಿದ್ದು ಹೇಗೆ ?

**32.** ವಿಶ್ವಸಂಸ್ಥೆಯ ಎರಡು ಉದ್ದೇಶಗಳನ್ನು ನಮೂದಿಸಿ.

**33.** ಚಿಕ್ಕದೇವರಾಜ ಒಡೆಯರ್ ಒಬ್ಬ ಸಾಹಿತ್ಯಾಭಿಮಾನಿ ಎಂದು ಏಕೆ ಕರೆಯುತ್ತೇವೆ ?

**34.** ಭಾರತದಲ್ಲಿ ಸಾಮಾಜಿಕ ಸುಧಾರಣಾ ಚಳುವಳಿ 19ನೇ ಶತಮಾನದಲ್ಲಿ ಪ್ರಾರಂಭವಾಯಿತು. ಏಕೆ ?

**35.** ರಾಷ್ಟ್ರಗಳ ಸಂಘ ತನ್ನ ನಿರ್ಧಾರಗಳನ್ನು ಎಲ್ಲಾ ರಾಷ್ಟ್ರಗಳ ಮೇಲೆ ಹೇರಲಾಗಲಿಲ್ಲ ಏಕೆ ?

36. ಕೀನ್ಯ ಸ್ವತಂತ್ರ ಗಣರಾಜ್ಯವಾದದ್ದು ಹೇಗೆ ?

37. ಕಳ್ಳ ಸಾಗಾಣಿಕೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

38. ವಿಶ್ವಸಂಸ್ಥೆಯ ಧರ್ಮದರ್ಶಿ ಸಮಿತಿ ರಚನೆಯಾದದ್ದು ಏಕೆ ?

39. ‘‘ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ ಭಾರತದಲ್ಲಿ ನಿರುದ್ಯೋಗವನ್ನು ಸೃಷ್ಟಿಸಿತು’’, ಹೇಗೆ ?

40. ಕರ್ನಾಟಕದ ಜನತೆ ಕಿತ್ತೂರು ರಾಣಿ ಚೆನ್ನಮ್ಮಳನ್ನು ಸ್ಮರಿಸಲೇಬೇಕು ಏಕೆ ?

41. ಅಬ್ರಕದ ಪ್ರಾಮುಖ್ಯತೆ ಏನು ?

42. ಉತ್ತರ ಭಾರತದ ನದಿಗಳು ಮತ್ತು ದಕ್ಷಿಣ ಭಾರತದ ನದಿಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

43. ಭಾರತದಲ್ಲಿ ರಸ್ತೆಗಳ ಪ್ರಾಮುಖ್ಯತೆ ಏನು ?

44. ಸಿಮೆಂಟಿನ ಬಳಕೆ ದೇಶದ ಅಭಿವೃದ್ಧಿಯ ಪ್ರತೀಕ ಹೇಗೆ ?

45. ಗೃಹ ಮತ್ತು ಸಣ್ಣ ಕೈಗಾರಿಕೆಗಳ ಯಾವುದಾದರೂ ನಾಲ್ಕು ಸಮಸ್ಯೆಗಳನ್ನು ನಮೂದಿಸಿ.

46. ಮೂರನೆ ಪಂಚವಾರ್ಷಿಕ ಯೋಜನೆಯು ಯಾವ ರಂಗಗಳಲ್ಲೂ ಸಾಧನೆಗಳನ್ನು ತರಲಾಗಲಿಲ್ಲ ಏಕೆ ?

**VI** ಈ ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ. **[6 × 3 = 18]**

**47.** ಭಾರತದಲ್ಲಿ ಫ್ರೆಂಚರು ತಮ್ಮ ಸಾಮ್ರಾಜ್ಯ ಸ್ಥಾಪಿಸಲಾಗಲಿಲ್ಲ ಏಕೆ ?

**48.** ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳೇನು ?

**49.** ಸರ್ಕಾರ ಮಹಿಳೆಯರ ಅಭಿವೃದ್ಧಿಗೆಂದೆ ಕೈಗೊಂಡಿರುವ ಅನೇಕ ಕಾರ್ಯಕ್ರಮಗಳನ್ನು ಪಟ್ಟಿಮಾಡಿ.

**50.** ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟಬಹುದು ?

**51.** ಜೀವನಾಧಾರ ಬೇಸಾಯ ಹಾಗೂ ಮಿಶ್ರ ಬೇಸಾಯದ ನಡುವಿನ ವ್ಯತ್ಯಾಸಗಳೇನು ?

**52.** ನಮ್ಮ ಪಾವತಿ ಶಿಲ್ಕು ಪ್ರತೀಕೂಲವಾಗೇ ಉಳಿದಿದೆ ಏಕೆ ?

**VII** ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯಗಳಲ್ಲಿ ಪ್ರತಿಯೊಂದಕ್ಕೂ ಉತ್ತರಿಸಿರಿ. **[3 × 4 = 12]**

**53.** ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಬಾಲಗಂಗಾಧರ್ ತಿಲಕ್‌ರ ಪಾತ್ರವನ್ನು ವಿವರಿಸಿ.

**54.** ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೃಷಿಯು ಮಹತ್ತರ ಪಾತ್ರ ವಹಿಸುತ್ತದೆ ಎಂದು ಹೇಗೆ ಹೇಳುವಿರಿ ?

**55.** ವಿಶ್ವಸಂಸ್ಥೆಯು ಹಲವು ದೊಡ್ಡ ಪ್ರಮಾಣದ ಯುದ್ಧಗಳನ್ನು ತಡೆದು ಶಾಂತಿ ಸಾಧಿಸಿದೆ. ಸಮರ್ಥಿಸಿ.

**VIII 56.** ಭಾರತದ ನಕ್ಷೆಯನ್ನು ಬರೆದು ಈ ಕೆಳಗಿನವುಗಳನ್ನು ಗುರುತಿಸಿ. **[1 + 3 = 4]**

(A) ಮನ್ನಾರ್ ಖಾರಿ

(B) ಪಂಪಾ ಸಾಗರ

(C) ಅಗರ್ತಲ

ಈ ಪರ್ಯಾಯ ಪ್ರಶ್ನೆ ಅಂಧ ವಿದ್ಯಾರ್ಥಿಗಳಿಗೆ ಮಾತ್ರ.

ಭಾರತೀಯರ ಜನಜೀವನದ ಮೇಲೆ ಹಿಮಾಲಯ ಪರ್ವತ ಶ್ರೇಣಿಗಳು ಬೀರುವ ಪ್ರಭಾವವೇನು ?